C.R.P.67

Form No.4 (Civil)
Deposition Sheets
(R.P.No.57)

**1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,**
**ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.**

ಎಸ್ ಸಿ ಸಂಖ್ಯೆ: **185/2025**

ಪ್ರಾಸಾ. **01** ಚಾಸಾ. **03**

| | | |
|---|---|---|
| ಸಾಕ್ಷಿದಾರರ ಹೆಸರು | : | ಕಾಂತರಾಜು. ಕೆ. ಎಲ್ |
| ತಂದೆಯ ಹೆಸರು | : | ಲಿಂಗಪ್ಪ. ಕೆ |
| ವಯಸ್ಸು | : | 39 ವರ್ಷಗಳು |
| ಉದ್ಯೋಗ | : | ಖಾಸಗಿ ಸಂಸ್ಥೆಯಲ್ಲಿ ಬೆರಳಚ್ಚುಗಾರ |
| ವಾಸ | : | ರಾಮನಹಳ್ಳಿ ಗ್ರಾಮ, ಶಿರಾ ತಾಲ್ಲೂಕು, ತುಮಕೂರು ಜಿಲ್ಲೆ. |

ಪ್ರಮಾಣ ವಚನ ಬೋಧಿಸಿದ ದಿನಾಂಕ: **27.02.2026.**

ಮುಖ್ಯ ವಿಚಾರಣೆ: ಮಾನ್ಯ ಸರ್ಕಾರಿ ಅಭಿಯೋಜಕರಿಂದ

ನಾನು ಈ ಮೊದಲು ನನ್ನ ಕುಟುಂಬ, ನನ್ನ ತಂದೆ ತಾಯಿ ಹಾಗೂ ನನ್ನ ತಮ್ಮ ಕಿಶೋರ್ ಕೆ. ಎಲ್ ಜೊತೆಯಲ್ಲಿ ಬೆಂಗಳೂರಿನ ವೈಟ್ಫೀಲ್ಡ್ ಬಳಿ ಇರುವ ನಾಗೊಂಡನಹಳ್ಳಿಯಲ್ಲಿ 1988 ರಿಂದ ಕರೋನ ಪರಿಸ್ಥಿತಿ ಬರುವವರೆಗೂ 2020 ರ ಮಾರ್ಚ್ ರ ವರೆಗೂ ವಾಸವಾಗಿದ್ದೆನು. ನನ್ನ ತಂದೆ ತಾಯಿಗಳಿಗೆ ನಾನು ಮತ್ತು ನನ್ನ ಉಲ್ಲೇಖಿಸಿದ ತಮ್ಮ ಕಿಶೋರ್ ಕೆ. ಎಲ್ ಮಾತ್ರ ಇಬ್ಬರು ಗಂಡು ಮಕ್ಕಳು.

2. ನಾನು ಈಗಾಗಲೇ ನುಡಿದಂತೆ ಅಂದಿನ ಕೊರೋನದ ಹಿನ್ನಲೆಯಲ್ಲಿ ನನ್ನ ತಮ್ಮ ಕಿಶೋರ್ ಕೆ. ಎಲ್ ನನ್ನು ಹೊರತುಪಡಿಸಿ ನಾನು ಮತ್ತು ನನ್ನ ಕುಟುಂಬದ ಇತರರು ಹಾಗೂ ನನ್ನ ತಂದೆ ತಾಯಿಗಳು ನಮ್ಮ ಸ್ವಂತ ಊರಾದ ರಾಮನಹಳ್ಳಿ, ಶಿರಾ ತಾಲ್ಲೂಕು, ತುಮಕೂರು ಜಿಲ್ಲೆಗೆ ಹೋದೆವು. ನನ್ನ ಸದರಿ ತಮ್ಮ ಕಿಶೋರ್ ಕೆ.ಎಲ್

ಕ್ಯಾಬ್ ಚಾಲಕನಾಗಿದ್ದ. ಆದರೂ ಸಹ ಆತ ಹಬ್ಬ ಹರಿದಿನಗಳಲ್ಲಿ ಮತ್ತು ಇತರ ಪರಿಸ್ಥಿತಿಗಳಲ್ಲಿ ಊರಿಗೆ ಬಂದು ಹೋಗುತ್ತಿದ್ದನು.

3. ನನ್ನ ತಮ್ಮ ಕಿಶೋರ್ ಕೆ. ಎಲ್ ಬೆಂಗಳೂರಿನ ಮುರೇಗೇಶಪಾಳ್ಯದಲ್ಲಿರುವ ವಿಶ್ವೇಶ್ವರಯ್ಯ ಪಿ ಯು ಕಾಲೇಜಿನಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದಾಗ ಆತನಿಗೆ ಮೀನಾ ಎಂಬ ಹೆಸರಿನ ಸಹಪಾಠಿ ಇದ್ದರು. ನನ್ನ ತಮ್ಮ ದಿನಾಂಕ 21.02.2025 ರಲ್ಲಿ ಹತ್ಯೆಗೀಡಾದನು. ಆತನ ಹತ್ಯೆಯ ದಿನಾಂಕದ ನಿಖಟ ಪೂರ್ವ 5 ವರ್ಷಗಳಲ್ಲಿ ನನ್ನ ತಮ್ಮ ಸದರಿ ಮೀನ ಎಂಬುವರೊಂದಿಗೆ ಸಂಪರ್ಕದಲ್ಲಿದ್ದನು. ಅವರಿಬ್ಬರ ನಡುವೆ ಹಣಕಾಸು ವ್ಯವಹಾರ ಸಹ ಇತ್ತು.

4. 2022 ನೇ ಸಾಲಿನ ಏಪ್ರಿಲ್ ಅಥವಾ ಮೇ ತಿಂಗಳ ಒಂದು ದಿನ ರಾತ್ರಿ 11-00 ರ ಸುಮಾರಿಗೆ 551 ರಿಂದ ಕೊನೆಗೊಳ್ಳುವ ಮೊಬೈಲ್ ಸಂಖ್ಯೆಯಿಂದ ಮೀನ ರವರು ನನ್ನ ಮೊಬೈಲ್ ಗೆ ದೂರವಾಣಿ ಕರೆ ಮಾಡಿ, ನನ್ನ ತಮ್ಮ ಕಿಶೋರ್ ಅವರು ದೂರವಾಣಿ ಕರೆ ಮಾಡಿದ ನಿಖಟ ಪೂರ್ವ ಮೂರು ತಿಂಗಳಿನಿಂದ ಮಾಸಂಪ್ರತಿ 80,000/- ರೂ ಗಳ ಚೀಟಿಯನ್ನು ಸರಿಯಾಗಿ ಕಟ್ಟಿರುವುದಿಲ್ಲವೆಂದು ಅದನ್ನು ನಾನು ಸರಿಯಾಗಿ ಕಟ್ಟಿಕೊಡಬೇಕೆಂದು ಮತ್ತು ಕಟ್ಟುವುದನ್ನು ಮುಂದುವರೆಸಬೇಕೆಂದು ಆಕೆ ತಿಳಿಸಿದರು. ಈ ಬಗ್ಗೆ ನಾನು ನನ್ನ ಸದರಿ ತಮ್ಮನನ್ನು ಮರುದಿನ ಬೆಳಗ್ಗೆ ವಿಚಾರಿಸಿದಾಗ ಮೀನ ರವರು ಹೇಳಿದ ಮೊತ್ತದಷ್ಟು ಬಾಕಿ ಇರುವುದಿಲ್ಲವೆಂದು ಆದರೆ ಸ್ವಲ್ಪ ಬಾಕಿ ಇದೆ ಎಂದು ಅದನ್ನು ತಾನು ಕೊಟ್ಟು ತೀರಿಸುವುದಾಗಿ ನನಗೆ ತಿಳಿಸಿದ. ಆಗ ನಾನು ಆತನನ್ನು ಊರಿಗೆ ಬಂದು ಜೀವನ ಮಾಡಲು ತಿಳಿಸಿದೆ. ತಾನು ಬಾಕಿ ಉಳಿಸಿಕೊಂಡಿರುವ ಹಣವನ್ನು ತೀರುವಳಿ ಮಾಡಿ ಊರಿನಲ್ಲಿ ಬಂದು ನೆಲೆಸುವುದಾಗಿ ಆತ ನುಡಿದ.

5. ದಿನಾಂಕ 21.02.2025 ರಂದು ಮೀನ ರವರು ನನ್ನ ತಮ್ಮನ ಮೊಬೈಲ್ ಫೋನಿನಿಂದ ನನ್ನ ತಂದೆಗೆ ಸದರಿ ದಿನದ ರಾತ್ರಿ 8-30 ರ ಸಮಯಕ್ಕೆ ಕರೆ ಮಾಡಿ ನನ್ನ ತಮ್ಮನಿಗೆ, ಕೊಡತಿ ಗ್ರಾಮದ ಸನ್ ಸಿಟಿ ಲೇಔಟ್ ನಲ್ಲಿ ಯಾರೋ ಚಾಕುವಿನಿಂದ ಹತ್ಯೆ ಮಾಡಿರುವುದಾಗಿ ಪರಿಣಾಮ ನನ್ನ ತಮ್ಮ ಬೆಲನಸ್ ಆಸ್ಪತ್ರೆಗೆ

ದಾಖಲಾಗಿರುವುದಾಗಿ ತಿಳಿಸಿದರು. ಮೀನ ರವರೆ ದುಡ್ಡಿನ ಸಲುವಾಗಿ ಏನಾದರು ಮಾಡಿರಬಹುದೆಂದು ಶಂಕಿಸಿ ಉದಾಸಿನ ಮಾಡಿದ್ದೆವು.

6. ಮರುದಿನ ಅಂದರೆ ದಿನಾಂಕ 22.02.2025 ರ ಬೆಳಗ್ಗೆ 8-00 ಕ್ಕೆ ವರ್ತೂರು ಪೋಲೀಸ್ ನವರು ಫೋನ್ ಮಾಡಿ ನನ್ನ ತಮ್ಮ ನಿಧನಹೊಂದಿರುವುದಾಗಿ ತಿಳಿಸಿದರು. ಸದರಿ ವಿಷಯ ತಿಳಿದು ನಾನು ಮತ್ತು ನನ್ನ ತಂದೆ ಬೆಂಗಳೂರಿಗೆ ಬಂದು ವರ್ತೂರು ಪೋಲೀಸರನ್ನು ಸಂಪರ್ಕಿಸಿದಾಗ ಅವರು ನಮ್ಮಗಳನ್ನು ಆಸ್ಪತ್ರೆಗೆ ಹೋಗಿ ಹಣ ಪಾವತಿಸಲು ತಿಳಿಸಿದರು. ಆ ಪ್ರಕಾರ ನಾವು ಸದರಿ ದಿನದ ಮಧ್ಯಾಹ್ನ 12-00 ರ ಸುಮಾರಿಗೆ ಬೆಲನಸ್ ಆಸ್ಪತ್ರೆಗೆ ಹೋಗಿ ಹಣ ಪಾವತಿಸಿದೆವು. ಆ ದಿನ ನಾವು ಶವವನ್ನು ಪಡೆಯಲಿಲ್ಲ. ಶವವನ್ನು ಪೋಲೀಸರು ಬಂದ ಮೇಲೆ ವೈದೇಹಿ ಆಸ್ಪತ್ರೆಗೆ ರವಾನಿಸಲಾಯಿತು. ಮರುದಿನ ಭಾನುವಾರ ಅಂದರ 23.02.2025 ರ ಬೆಳಗ್ಗೆ 7-30 ರ ಸಮಯಕ್ಕೆ ಬರಲು ತಿಳಿಸಿದ್ದರು. ಸದರಿ ದಿನದಂದು ಮರಣೋತ್ತರ ಪರೀಕ್ಷೆಯ ನಂತರ ಶವವನ್ನು ಬೆಳಗ್ಗೆ 11-00 ಗಂಟೆಗೆ ನಮಗೆ ನೀಡಿದರು.

7. ವೈದೇಹಿ ಆಸ್ಪತ್ರೆಯಲ್ಲಿ ನಾವು ನನ್ನ ತಮ್ಮನ ಶವವನ್ನು ನೋಡಿದಾಗ ಶವದ ಎದೆಯ ಭಾಗ, ಹೊಟ್ಟೆಯ ಎಡ ಭಾಗಗಳಲ್ಲಿ ಚುಚ್ಚಿದ ಗಾಯಗಳು ಇದ್ದವು ಮತ್ತು ಆತನ ಎಡ ಮೊಣಕೈ ಭಾಗದಲ್ಲಿ ಚರ್ಮ ಕಿತ್ತು ಹೋಗಿತ್ತು ಮತ್ತು ಆತನ ಎಡಗೈ ಬೆರಳುಗಳಿಗೆ ತರಚಿದ ಗಾಯಗಳಾಗಿತ್ತು. ನಂತರ ಮೀನ ರ ಗಂಡ ಸತೀಶ್ ರೆಡ್ಡಿ( ಆರೋಪಿ) ನನ್ನ ತಮ್ಮನನ್ನು ಚಾಕುವಿನಿಂದ ಹತ್ಯೆಮಾಡಿ ಕೊಲೆ ಮಾಡಿರುವುದಾಗಿ ತಿಳಿದುಬಂತು.

<u>ಪಾಟೀ ಸವಾಲುಃ ಶ್ರೀ ಬಿಎಸ್ ಕೆ ವಕೀಲರಿಂದ ಆರೋಪಿಯ ಪರವಾಗಿಃ</u>

8. ನನ್ನ ಮೃತ ತಮ್ಮ ಆತ ಕೊಲೆಯಾದ ನಿಖಟ ಪೂರ್ವ 5 ವರ್ಷಗಳಿಂದ ಉಲ್ಲೇಖಿಸಿದ ಮೀನ ಎಂಬುವವರ ಸಂಪರ್ಕದಲ್ಲಿದ್ದ ಎಂಬುದಾಗಿ ಆತ ಕೊಲೆಯಾದ ನಿಖಟ ಪೂರ್ವ ಮೂರು ವರ್ಷಗಳಿಂದ ನನಗೆ ಗೊತ್ತಿತ್ತು.

9. ಮೀನಾರವರು ನಾನು ಮುಖ್ಯ ವಿಚಾರಣೆಯಲ್ಲಿ ನುಡಿದಂತೆ ನನಗೆ ಫೋನ್ ಮಾಡುವ ಮೊದಲು ಬಾಕಿ ಹಣದ ಬಗ್ಗೆ ನನ್ನ ತಮ್ಮನನ್ನು ಕೇಳಿದ್ದರೋ ಇಲ್ಲವೋ

ನನಗೆ ಗೊತ್ತಿಲ್ಲ. ಆದರೆ ನನ್ನ ತಮ್ಮ ಆಕೆ ನನಗೆ ಫೋನು ಮಾಡಿದ ನಿಖರ ಪೂರ್ವ ಮೂರು ತಿಂಗಳಿನಿಂದ ಮಾಸಂಪ್ರತಿ ರೂ.80,000/- ಗಳನ್ನು ಸರಿಯಾಗಿ ಕಟ್ಟಿಲ್ಲವೆಂದು ಆ ಬಾಕಿಯನ್ನು ನಾನು ಕಟ್ಟಿ ಮುಂದುವರೆದು ಕಟ್ಟಿಕೊಂಡು ಹೋಗಬೇಕೆಂದು ತಿಳಿಸಿದರು. ಪ್ರಶ್ನಿಸಿದಂತೆ ನಾನು ಈ ಬಗ್ಗೆ ನನ್ನ ತಮ್ಮನನ್ನು ಮೀನಾರವರು ನನಗೆ ಫೋನ್ ಮಾಡಿದ ಮರುದಿನ ಬೆಳಗ್ಗೆ ವಿಚಾರಿಸಿದೆನು. ಆಗ ನನ್ನ ತಮ್ಮ ಮೀನಾರವರು ನುಡಿದಷ್ಟು ಹಣ ಬಾಕಿ ಇರುವುದಿಲ್ಲ, ಬಾಕಿ ಸ್ವಲ್ಪವಿದೆ ಎಂದು ಮತ್ತು ಬಾಕಿ ಮೊತ್ತವನ್ನು ತಾನು ತೀರುವಳಿ ಮಾಡುವುದಾಗಿ ನನಗೆ ತಿಳಿಸಿದ.

10. ಸದರಿ ಬಾಕಿಯನ್ನು ಆದಷ್ಟು ಬೇಗನೇ ತೀರುವಳಿ ಮಾಡಿ ಊರಿಗೆ ಬಂದು ನೆಲೆಸು ಎಂದು ನಾನು ನನ್ನ ತಮ್ಮನಿಗೆ ಹೇಳಿದ್ದೇನೇ ವಿನಃ ಈಗ ಸೂಚಿಸಿದಂತೆ ಹೆಣ್ಣು ಮಕ್ಕಳಿಗೆ ಮೋಸ ಮಾಡಬೇಡ ಬಾಕಿ ಹಣವನ್ನು ತೀರಿಸು ಎಂಬುದಾಗಿ ನಾನು ಸಲಹೆ ನೀಡಲಿಲ್ಲ.

11. ನನ್ನ ತಮ್ಮನ ವಿರುದ್ಧ ಬೆಂಗಳೂರಿನ ಇತರ ನ್ಯಾಯಾಲಯಗಳಲ್ಲಿ ಪೌಜುದಾರಿ ಪ್ರಕರಣಗಳು ಇತ್ಯರ್ಥಕ್ಕೆ ಬಾಕಿ ಇದ್ದವು ಎಂದರೆ ಸರಿ. ಸಾಕ್ಷಿ ಮುಂದುವರೆದು ಸ್ವ ಇಚ್ಛೆಯಿಂದ ತನ್ನ ತಮ್ಮ ಕಿಶೋರ್ ಕೆ.ಎಲ್ ಬೇರೊಬ್ಬರಿಂದ ಅಂದರೆ ಸತೀಶ್ ಗೌಡ ಎಂಬುವವರಿಂದ ರೂ.10,00,000/- ಗಳನ್ನು ಸಾಲವಾಗಿ ಪಡೆದು ಸದರಿ ಮೀನಾಳಿಗೆ ನೀಡಿದ್ದು, ಆ ಸಾಲ ಕುರಿತಂತೆ ನನ್ನ ತಮ್ಮ ಒಪ್ಪಿಕೊಂಡಂತೆ ಬಡ್ಡಿಯನ್ನು ಸತೀಶ್ ಗೌಡರಿಗೆ ನೀಡದೇ ಇದ್ದ ಕಾರಣ ಸತೀಶ್ ಗೌಡ ಅಪಹರಣ ಆಪಾದನೆ ಕುರಿತಂತೆ ಪೌಜುದಾರಿ ಪ್ರಕರಣವನ್ನು ದಾಖಲಿಸಿದಾಗ ಮೀನಾರವರೆ ರೂ.10,00,000/-ಗಳನ್ನು ಸತೀಶ್ ಗೌಡರವರಿಗೆ ನೀಡಿ ಆ ಪ್ರಕರಣ ಇತ್ಯರ್ಥವಾಯಿತು ಎಂದು ಹೇಳುತ್ತಾರೆ.

12. ಸೂಚಿಸಿದಂತೆ ಆಗಾಗ್ಗೆ ಮೀನಾ ಮನೆಯ ಬಳಿ ಹೋಗಿ ಮೀನಾಳೊಂದಿಗೆ ಜಗಳ ಮಾಡುತ್ತಿರಲಿಲ್ಲ. ನೀವು ಈಗಾಗಲೇ ವಿವರಿಸಿದಂತೆ ಸತೀಶ್ ಗೌಡರಿಂದ ರೂ.10,00,000/- ಹಣ ಪಡೆದು ಮೀನಾರವರಿಗೆ ನೀಡಿರಲಿಲ್ಲ ಆದ್ದರಿಂದ ಮೀನಾರವರು ಸದರಿ ರೂ.10,00,000/- ಗಳನ್ನು ಸತೀಶ್ ಗೌಡರಿಗೆ ಹಿಂದಿರುಗಿಸುವ ಪ್ರಶ್ನೆ ಉದ್ಭವಿಸುವುದಿಲ್ಲ ಎಂದರೆ ಸರಿಯಲ್ಲ.

13. ಮೀನಾರವರಿಗೆ ಪ್ರಾಥಮಿಕ ಶಾಲೆಯಲ್ಲಿ ಓದುವ ಇಬ್ಬರು ಗಂಡು ಮಕ್ಕಳಿದ್ದಾರೆ ಎಂದರೆ ಸರಿ.

14. ನಿಮ್ಮ ತಮ್ಮ ಆತ ಕೊಲೆ ಆದ ದಿನದ ನಿಖಟ ಪೂರ್ವ 5 ವರ್ಷಗಳಿಂದ ಮೀನಾಳ ಸಂಪರ್ಕದಲ್ಲಿದ್ದು ಅವರಿಬ್ಬರ ನಡುವೆ ಹಣಕಾಸು ವ್ಯವಹಾರ ಇತ್ತು ಎಂಬುದಾಗಿ ನೀವು ತಿಳಿದಿರಿ ಎಂಬುದಾಗಿ ನುಡಿದಿರುವಿರಿ, ಹಾಗಾದರೆ ನೀವೇನಾದರು ನಿಮ್ಮ ತಮ್ಮನಿಗೆ ಮೀನಾ ಸಂಸಾರಿಯಾಗಿದ್ದು ಅಲ್ಲದೇ ಒಬ್ಬ ಹೆಣ್ಣು ಮಗಳಾಗಿದ್ದು ಅವಳೊಂದಿಗೆ ಹಣಕಾಸು ವ್ಯವಹಾರ ಹೊಂದುವುದು ಸರಿಯಲ್ಲ ಎಂದೇನಾದರೂ ಬುದ್ದಿವಾದ ಸಲಹೆಯನ್ನು ಹೇಳಿರುವಿರಾ ಎಂದರೆ ಬೇಗ ಹಣವನ್ನು ತೀರುವಳಿ ಮಾಡಿ ಊರಿಗೆ ಬಂದು ನೆಲೆಸು ಎಂದು ತಿಳಿಸಿದ್ದೆನು.

15. ನಿಮ್ಮ ತಮ್ಮನನ್ನು ಯಾವ ನಿಖರ ಸ್ಥಳದಲ್ಲಿ ಹತ್ಯೆಗೆ ಒಳಪಡಿಸಿರುತ್ತಾರೆ ಎಂಬುದಾಗಿ ತಿಳಿಯಿತೇ ಎಂದರೆ ನನಗೆ ತಿಳಿದಿರುವುದಿಲ್ಲ. ನಿಮ್ಮ ತಮ್ಮ ಮೀನಾರವರ ಮನೆಯ ಬಳಿ ಹೋಗಿ ಚಾಕು ವಸ್ತುವನ್ನು ಉಪಯೋಗಿಸಿ ಗಲಾಟೆ ಮಾಡಲು ಹೋದಾಗ ಆರೋಪಿ ಮೀನಾಳನ್ನು ರಕ್ಷಿಸಲು ಅಡ್ಡ ಬಂದಾಗ ನಿಮ್ಮ ತಮ್ಮನೇ ಕಾಲು ಜಾರಿ ಕೆಳಗೆ ಬಿದ್ದು ತನ್ನ ಚಾಕುವಿನಿಂದ ತಾನೇ ಗಾಯ ಮಾಡಿಕೊಂಡು ನಿಧನಹೊಂದಿರುತ್ತಾನೆ ಎಂದರೆ ಸರಿಯಲ್ಲ.

16. ನಿಮ್ಮ ತಮ್ಮ ಆಗಾಗ್ಗೆ ಚಾಕುವಿನೊಂದಿಗೆ ಮತ್ತು ವಿಷದ ಶೀಷೆಯೊಂದಿಗೆ ಮೀನಾಳ ಮನೆಯ ಬಳಿ ಹೋಗಿ ಮೀನಾ ನಿಮ್ಮ ತಮ್ಮನ ಜೊತೆಗೆ ಬರಲು ಒತ್ತಾಯ ಮಾಡಿ ಪೀಡಿಸುತ್ತಿದ್ದ ಎಂದರೆ ಸುಳ್ಳು. ಸೂಚನೆಗಳ ಬಗ್ಗೆ ಮೀನಾಳ ಮನೆಯ ಅಕ್ಕಪಕ್ಕದವರು ನಿಮ್ಮ ತಮ್ಮನಿಗೆ ಬುದ್ದಿವಾದ ಸಲಹೆಗಳನ್ನು ಹೇಳಿದ್ದರೂ ಅವುಗಳಿಗೆ ಬೆಲೆ ನೀಡದೆ ಆತ ತನ್ನ ಸೂಚಿಸಿದ ನಡತೆಗಳನ್ನು ಪುನರಾವರ್ತಿಸುತ್ತಿದ್ದ ಎಂದರೆ ಸುಳ್ಳು.

17. ಆರೋಪಿ ಯಾವುದೇ ಚಾಕುವನ್ನು ಉಪಯೋಗಿಸಿ ನಿಮ್ಮ ತಮ್ಮನಿಗೆ ಹಲ್ಲೆ ಮಾಡಿಲ್ಲ, ನಿಮ್ಮ ತಮ್ಮನೇ ತನ್ನ ಚಾಕುವಿನಿಂದಲೇ ತಾನೇ ಸ್ವಯಂ ಹಲ್ಲೆ ಗಾಯಗಳನ್ನು ಮಾಡಿಕೊಂಡು ನಿಧನಹೊಂದಿದ್ದಾನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ

18. ನೀವು ಪಾಟೀ ಸವಾಲಿನಲ್ಲಿ ಉತ್ತರಿಸಬೇಕಾದರೆ ಆರೋಪಿ ಪರ ವಕೀಲರ ಸೂಚನೆಗಳಿಗೆ ಉತ್ತರಿಸುತ್ತಾ ನಿಮ್ಮ ತಮ್ಮನ ವಿರುದ್ಧ ಇತ್ಯರ್ಥಕ್ಕೆ ಬಾಕಿ ಇತ್ತು ಎಂಬ ಒಂದು ಪೌಜುದಾರಿ ಪ್ರಕರಣದ ಬಗ್ಗೆ ನುಡಿದಿರಿ, ನಿಮ್ಮ ತಮ್ಮನ ವಿರುದ್ಧ ಕೇವಲ ಒಂದು ಪೌಜುದಾರಿ ಪ್ರಕರಣ ಇತ್ಯರ್ಥಕ್ಕೆ ಬಾಕಿ ಇತ್ತೆ ಅಥವಾ ಹಲವು ಪ್ರಕರಣಗಳು ಇತ್ಯರ್ಥಕ್ಕೆ ಬಾಕಿ ಇದ್ದವೇ ಎಂದರೇ ಕೇವಲ ಒಂದು ಪೌಜುದಾರಿ ಪ್ರಕರಣ ಇತ್ಯರ್ಥಕ್ಕೆ ಬಾಕಿ ಇತ್ತು ಎಂದು ಹೇಳುತ್ತಾರೆ.

ಪಾಟೀ ಸವಾಲುಃ ಶ್ರೀ ಬಿಎಸ್ ಕೆ ವಕೀಲರಿಂದ ಆರೋಪಿಯ ಪರವಾಗಿಃ

19. ನಿಮ್ಮ ಮರು ವಿಚಾರಣೆಯ ವಿವರಣೆ ಸರಿಯಲ್ಲ, ನಿಮ್ಮ ತಮ್ಮ ಕ್ಯಾಬ್ ಚಾಲಕನಾಗಿ ಅನೇಕ ಗೂಂಡಾ ವರ್ತನೆ ಮಾಡಿ ಆತನ ವಿರುದ್ಧ ಇತರ ಪೌಜುದಾರಿ ಪ್ರಕರಣಗಳು ಸಹ ಇತ್ಯರ್ಥಕ್ಕೆ ಬಾಕಿ ಇದ್ದವು ಎಂದರೆ ಸುಳ್ಳು. ಮೀನಾರವರ ವತಿಯಿಂದಲೇ ನಿಮ್ಮ ತಮ್ಮನ ವಿರುದ್ಧ ವೈಟ್ಫೀಲ್ಡ್ ಪೋಲೀಸ್ ಠಾಣೆಯಲ್ಲಿ ಪೌಜುದಾರಿ ಪ್ರಕರಣವನ್ನು ದಾಖಲಿಸಿದಾಗ ಸೂಚಿಸಿದ ಪ್ರಕರಣದ ವಿಚಾರಣೆ ಸಮಯದಲ್ಲಿ ನಿಮ್ಮ ತಮ್ಮ ಮೀನಾಳ ತಂಟೆ ತಕರಾರಿಗೆ ಹೋಗುವುದಿಲ್ಲ ಎಂಬುದಾಗಿ ನುಡಿದು ಹಿಂಬರಹ ಬರೆದು ನೀಡಿದ್ದರು ಎಂದರೆ ಸೂಚನೆ ಬಗ್ಗೆ ನನಗೆ ಮಾಹಿತಿ ಇಲ್ಲ.

**(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)**

ಓ. ಹೇ. ಕೇ. ಸ. ಒ.

(ಸಿದ್ದಲಿಂಗ ಪ್ರಭು)
1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.